# ವಿಸ್ತಾರ ನ್ಯೂಸ್ ಬೆಸ್ಟ್ ಟೀಚರ್ ಅವಾರ್ಡ್–2023 ಪುರಸ್ಕೃತರ ಪರಿಚಯ

## ಹುಬ್ಬಳ್ಳಿ–ಧಾರವಾಡ

**1.ಶ್ರೀ ಎಲ್. ಐ. ಲಕ್ಕಮ್ಮನವರ**

**ಶಿಕ್ಷಕರು, ಸರ್ಕಾರಿ ಕಿರಿಯ ಉರ್ದು ಪ್ರಾಥಮಿಕ ಶಾಲೆ, ಹೆಬ್ಬಳ್ಳಿ**

ಶಿಕ್ಷಣದಿಂದ ಮಾತ್ರ ಸಮಾಜದಲ್ಲಿ ಬದಲಾವಣೆ ಸಾಧ್ಯ ಎಂದು ಬಲವಾಗಿ ನಂಬಿರುವ ಶಿಕ್ಷಕರು ಶ್ರೀ ಎಲ್. ಐ. ಲಕ್ಕಮ್ಮನವರ. ಹೆಬ್ಬಳ್ಳಿಯ ಸರ್ಕಾರಿ ಕಿರಿಯ ಉರ್ದು ಪ್ರಾಥಮಿಕ ಶಾಲೆ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಇವರು 1994ರಿಂದ ಶಿಕ್ಷಕರಾಗಿ ನೂರಾರು ವಿದ್ಯಾರ್ಥಿಗಳಿಗೆ ಶಿಕ್ಷಣದ ಜತೆಗೆ ಜೀವನಪಾಠವನ್ನೂ ಹೇಳಿಕೊಟ್ಟಿದ್ದಾರೆ. ಸಾಕ್ಷರೋತ್ತರ ಕಾರ್ಯಕ್ರಮದಲ್ಲಿ ಕ್ಲಸ್ಟರ್ ಸಂಯೋಜಕರಾಗಿ ಐದು ವರ್ಷ ಸೇವೆ ಸಲ್ಲಿಸಿರುವ ಇವರು, ಸಾಕ್ಷರೋತ್ತರ ಹಾಗೂ ಮುಂದುವರಿಕೆ ಕಾರ್ಯಕ್ರಮದಲ್ಲಿ 7 ವರ್ಷಗಳ ಸೇವೆ ಸಲ್ಲಿಸಿದ್ದಾರೆ. 'ಕನ್ನಡ ನಾಡು ಸಾಕ್ಷರ ನಾಡು' ಕಾರ್ಯಕ್ರಮದಲ್ಲಿ ಸಂಯೋಜಕನಾಗಿ ಸೇವೆ ಸಲ್ಲಿಸಿರುವ ಶ್ರೀ ಎಲ್. ಐ. ಲಕ್ಕಮ್ಮನವರ ಧಾರವಾಡದ 'ಅಕ್ಷರತಾಯಿ' ಎಂದೇ ಖ್ಯಾತರಾದ ದತ್ತಿದಾನಿ ನಿವೃತ್ತ ಶಿಕ್ಷಕಿ ಶ್ರೀಮತಿ ಲೂಸಿ ಸಾಲ್ಡಾನರವರ ಹೆಸರಿನಿಂದ ಆರಂಭವಾದ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷನಾಗಿ ಕೆಲಸ ಮಾಡಿದ್ದಾರೆ. ಶಿಕ್ಷಣದ ಕುರಿತು ಜಾಗೃತಿ ಮೂಡಿಸುವ ಯಾವ ಅವಕಾಶವನ್ನೂ ಬಿಡದ ಇವರು, 'ಅಪ್ಪ ನನ್ನ ಹೊಡಿಬ್ಯಾಡಪ್ಪ' ಕಿರು ಶೈಕ್ಷಣಿಕ ಚಲನಚಿತ್ರಕ್ಕೆ ಕತೆ ಬರೆದಿದ್ದಾರೆ. ಭಾರತ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಸಮಿತಿಯ ಸದಸ್ಯರಾಗಿ ಸದ್ಯ ಸೇವೆ ಸಲ್ಲಿಸುತ್ತಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ ಶ್ರೀ ಎಲ್. ಐ. ಲಕ್ಕಮ್ಮನವರ ನೀಡಿರುವ ಅಪಾರ ಕೊಡುಗೆಯನ್ನು ಪರಿಗಣಿಸಿ ವಿಸ್ತಾರ ನ್ಯೂಸ್ ಗೌರವಿಸುತ್ತಿದೆ.

**2.ಶ್ರೀ ಪ್ರಕಾಶ ಹನುಮಪ್ಪ ಕಂಬಳಿ**

**ಸರ್ಕಾರಿ ಪ್ರೌಢ ಶಾಲೆ, ಬರದ್ವಾಡ, ಕುಂದಗೋಳ, ಧಾರವಾಡ.**

ಸ್ವಸ್ಥ ಸಮಾಜದ ನಿರ್ಮಾಣದಲ್ಲಿ ಶಾಲಾ ಪಠ್ಯಕ್ರಮದ ಪಾತ್ರ ಎಷ್ಟು ಮಹತ್ವದ್ದೋ, ದೈಹಿಕ ಶಿಕ್ಷಣವೂ ಅಷ್ಟೇ ಅತ್ಯಗತ್ಯ ಎಂಬುದನ್ನು ಮನಗಂಡು, ಮಕ್ಕಳಿಗೆ ದೈಹಿಕ ಶಿಕ್ಷಣ ನೀಡುತ್ತಿರುವ ದೈಹಿಕ ಶಿಕ್ಷಕರು ಶ್ರೀ ಪ್ರಕಾಶ ಹನುಮಪ್ಪ ಕಂಬಳಿ. 20 ವರ್ಷಗಳ ಕಾಲ ಪ್ರಾಥಮಿಕ ಶಾಲೆಗಳಲ್ಲಿ ಹಾಗೂ ಕಳೆದ 4 ನಾಲ್ಕು ವರ್ಷಗಳಿಂದ ಪ್ರೌಢ ಶಾಲೆಯಲ್ಲಿ ದೈಹಿಕ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕ್ರೀಡೆ, ಯೋಗ, ಸಂಗೀತ, ನಾಟಕ, ಸಾಹಿತ್ಯ ರಚನೆ, ಸಮಾಜ ಸೇವೆ ಹೀಗೆ ಬಹು ವಿಷಯಗಳಲ್ಲಿ ಆಸಕ್ತಿ ಹೊಂದಿರುವ ಇವರು ನೂರಾರು ಮಕ್ಕಳು ಕ್ರೀಡೆಯಲ್ಲಿ ಸಾಧನೆ ಮಾಡಲು ಕಾರಣರಾಗಿದ್ದಾರೆ. ಕವಿಯಾಗಿ ಈಗಾಗಲೇ ಕವನ ಸಂಕಲನವನ್ನೂ ಹೊರ ತಂದಿರುವ ಶ್ರೀ ಪ್ರಕಾಶ ಹನುಮಪ್ಪ ಕಂಬಳಿ ಅವರಿಗೆ ಶಿಕ್ಷಣ ಇಲಾಖೆಯು ನೀಡುವ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ನೀಡುವ ಉತ್ತಮ ಶಿಕ್ಷಕ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿ, ಸನ್ಮಾನಗಳು ಸಂದಿವೆ. ದೈಹಿಕ ತರಬೇತಿ ಕೇವಲ ದೈಹಿಕ ಚಟುವಟಿಕೆಗಳಿಗೆ ಮಾತ್ರ ಅಲ್ಲ, ಸ್ಪರ್ಧಾ ಮನೋಭಾವ, ತಾಳ್ಮೆ–ಸಹನೆ ಮೊದಲಾದ ಸಫಲ ಜೀವನಕ್ಕೆ ಬೇಕಾಗುವ ಪ್ರಮುಖ ಪಾಠಗಳನ್ನು ಕಲಿಸುವಂಥದ್ದು ಎನ್ನುವ ಶ್ರೀ ಪ್ರಕಾಶ ಹನುಮಪ್ಪ ಕಂಬಳಿ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ ವಿಸ್ತಾರ ನ್ಯೂಸ್ ಗೌರವಿಸುತ್ತಿದೆ.

**3.ಶ್ರೀ ರಾಜಶೇಖರ ಮಲ್ಲಪ್ಪ ಹೊನ್ನಪ್ಪನವರ**

**ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಲಕಮಾಪುರ, ಧಾರವಾಡ**

ಧಾರವಾಡ ಜಿಲ್ಲೆ ಲಕಮಾಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮೂರು ಬಾರಿ 'ತಾಲೂಕಿನ ಉತ್ತಮ ಶಾಲೆ' ಮತ್ತು ಎರಡು ಬಾರಿ 'ಜಿಲ್ಲೆಯ ಉತ್ತಮ ಶಾಲೆ' ಎಂದು ಪ್ರಶಸ್ತಿ ಪಡೆದುಕೊಂಡಿದೆ. ಇದಕ್ಕೆ ಕಾರಣರಾದವರಲ್ಲಿ ಪ್ರಮುಖರು ಶಾಲೆಯ ಶಿಕ್ಷಕ ಶ್ರೀ ರಾಜಶೇಖರ ಮಲ್ಲಪ್ಪ ಹೊನ್ನಪ್ಪನವರ. ಶಾಲೆಯ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಾ, ಶಾಲೆಯ ಮಕ್ಕಳು ಕಲಿಕೆಯಲ್ಲಿ ಮುಂದಿರುವಂತೆ ನೋಡಿಕೊಳ್ಳುತ್ತಿರುವ ಇವರು, ಮಕ್ಕಳಿಗೆ ಪಾಠದ ಜತೆಗೆ ಜೀವನಪಾಠವನ್ನೂ ಹೇಳಿಕೊಡುತ್ತಿದ್ದಾರೆ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಕಾರಣರಾಗಿದ್ದಾರೆ. ಇಷ್ಟು ಮಾತ್ರವಲ್ಲದೆ, ಶಿಕ್ಷಕರ ಸಂಘಟನೆಯಲ್ಲಿಯೂ ಪ್ರಮುಖ ಪಾತ್ರವಹಿಸುತ್ತಾ ಬಂದಿದ್ದಾರೆ. ಧಾರವಾಡ ತಾಲೂಕು ಶಿಕ್ಷಕರ ಸಂಘದ ಅಧ್ಯಕ್ಷರಾಗಿ, ಪ್ರಧಾನ ಕಾರ್ಯದರ್ಶಿಯಾಗಿ, ಶಿಕ್ಷಕರ ಪತ್ತು ಬೆಳೆಸುವ ಸಹಕಾರಿ ಸಂಘದ ನಿರ್ದೇಶಕರಾಗಿ ಮೂರು ಅವಧಿಗೆ ಆಯ್ಕೆಯಾಗಿದ್ದಾರೆ. ಶಿಕ್ಷಕರ ಸಂಘದ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಎರಡನೇ ಅವಧಿಯಲ್ಲಿ ಈಗ ಸೇವೆ ಸಲ್ಲಿಸುತ್ತಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ ಇವರು ನೀಡಿರುವ ಕೊಡುಗೆಯನ್ನು ಪರಿಗಣಿಸಿ ವಿಸ್ತಾರ ನ್ಯೂಸ್ ಗೌರವಿಸುತ್ತಿದೆ.

**4.ಶ್ರೀ ನೀಲಕಂಠ ಎಸ್. ಗೋವಿಂದ ರೆಡ್ಡಿ**

**ಮುಖ್ಯೋಪಾಧ್ಯಾಯರು, ಕೆ.ಇ.ಬೋರ್ಡ್ ಪ್ರೌಢಶಾಲೆ, ಮಾಳಮಡ್ಡಿ, ಧಾರವಾಡ**

ಶಾಲೆಯಲ್ಲಿ ಔಷಧಿವನ ನಿರ್ಮಿಸಿ, ಮಕ್ಕಳೇ ಅದನ್ನು ನೋಡಿಕೊಳ್ಳುವಂತೆ ವ್ಯವಸ್ಥೆ ಮಾಡಿ, ಇದಕ್ಕೆ ಬೇಕಾದ ಗೊಬ್ಬರಕ್ಕಾಗಿ ಘಟಕವೊಂದನ್ನು ಸ್ಥಾಪಿಸಿ, ಶಾಲೆಯ ಮಕ್ಕಳು ಪರಿಸರ ಪ್ರೇಮಿಗಳಾಗುವಂತೆ ಮಾಡಿದವರು ಶ್ರೀ ನೀಲಕಂಠ ಎಸ್. ಗೋವಿಂದ ರೆಡ್ಡಿ. ಇಪ್ಪತ್ತು ವರ್ಷಗಳ ಕಾಲ ಸಹ ಶಿಕ್ಷಕರಾಗಿ, ಈಗ ಮಾಳಮಡ್ಡಿಯ ಕೆ.ಇ.ಬೋರ್ಡ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸುತ್ತಿರುವ ಇವರು ಶಾಲೆಯ ಹಳೆಯ ವಿದ್ಯಾರ್ಥಿಗಳನ್ನು ಸಂಘಟಿಸಿ, ಇವರ ನೆರವಿನಿಂದ ಶಾಲೆಯನ್ನು ಅಭಿವೃದ್ಧಿಪಡಿಸಿದ್ದಾರೆ. ಶಾಲೆಗೆ ಅಗತ್ಯವಾಗಿದ್ದ ವಿದ್ಯುತ್‌ಗಾಗಿ ಸೋಲಾರ್ ಘಟಕ ಸ್ಥಾಪಿಸಲಾಗಿದೆ. ನೂರಾರು ಮಕ್ಕಳು ಇಂದು ಈ ಶಾಲೆಯಲ್ಲಿ ಉಚಿತವಾಗಿ ಶಿಕ್ಷಣ ಪಡೆಯುವಂತೆ ವ್ಯವಸ್ಥೆ ಮಾಡಲಾಗಿದೆ. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಅಗತ್ಯ ಸೌಕರ್ಯ ಒದಗಿಸುವುದರ ಜತೆಗೆ ಶಿಕ್ಷಕರ ಸಂಘಟನೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿರುವ ಇವರು ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ರಾಜ್ಯ ಘಟಕದ ಸದಸ್ಯರಾಗಿ, ದಿ.ಸೆಕೆಂಡರಿ ಟೀಚರ್ಸ್ ಕೋ ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ರಾಜ್ಯಮಟ್ಟದ ಸಂಪನ್ಮೂಲ ವ್ಯಕ್ತಿಯಾಗಿ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಗಣಿತದ ವಿಷಯದಲ್ಲಿ ತರಬೇತಿ ನೀಡುತ್ತಾ ಬಂದಿರುವ ಇವರು, ಧಾರವಾಡ ಜಿಲ್ಲಾ ಗಣಿತ ಪರಿವಾರದ ಅಧ್ಯಕ್ಷರಾಗಿಯೂ ಗಣಿತದ ಕಲಿಕೆಗೆ ಕೆಲಸ ಮಾಡಿದ್ದಾರೆ. ಗಣಿತ ಪ್ರೇಮಿ ಶ್ರೀ ನೀಲಕಂಠ ಎಸ್. ಗೋವಿಂದ ರೆಡ್ಡಿಯವರು ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯನ್ನು ವಿಸ್ತಾರ ನ್ಯೂಸ್ ಹೆಮ್ಮೆಯಿಂದ ಸ್ಮರಿಸಿ, ಗೌರವಿಸುತ್ತಿದೆ.

5.ಶ್ರೀ ಎಫ್ ವಿ ಮಂಜಣ್ಣವರ

ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ನವಲೂರ, ಧಾರವಾಡ

ಕಲಿಕೆಯ ವಾತಾವರಣ ಕ್ರೀಯಾಶೀಲವಾಗಿರಬೇಕು, ಧನಾತ್ಮಕವಾಗಿರಬೇಕು, ಎಲ್ಲವನ್ನೂ ಒಳಗೊಳ್ಳುವಂತಿರಬೇಕು ಎಂಬ ತತ್ವದಲ್ಲಿ ನಂಬಿಕೆಯಿಟ್ಟು ತರಗತಿಗಳಲ್ಲಿ ಕಲಿಕೆಯ ವಾತಾವರಣವನ್ನೇ ಬದಲಾಯಿಸಿ, ವಿದ್ಯಾರ್ಥಿಗಳಲ್ಲಿ ಹೊಸ ಹುರುಪು ಮೂಡಿಸುತ್ತಿರುವ ಶಿಕ್ಷಕ ಶ್ರೀ ಎಫ್ ವಿ ಮಂಜಣ್ಣವರ. ಕುಂದಗೋಳ ತಾಲೂಕು ಗುಡಗೇರಿಯ ಎಫ್.ಸಿ.ಎಮ್. ಸರ್ಕಾರಿ ಪ್ರೌಢಶಾಲೆಯಲ್ಲಿ ವೃತ್ತಿ ಜೀವನ ಆರಂಭಿಸಿದ ಇವರು, 12 ವರ್ಷಗಳ ಕಾಲ ಧಾರವಾಡ ಗ್ರಾಮೀಣ ಬಿಇಓ ಕಚೇರಿಯಲ್ಲಿ ಶಿಕ್ಷಣ ಸಂಯೋಜಕರಾಗಿ ಸೇವೆ ಸಲ್ಲಿಸಿದ್ದಾರೆ. ಕಳೆದ 10 ವರ್ಷಗಳಿಂದ ನವಲೂರ ಪ್ರೌಢಶಾಲಾ ಸಹ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಬೋಧನೆಯಲ್ಲಿ ಹೊಸ ಹೊಸ ಪ್ರಯೋಗಗಳನ್ನುಮಾಡುತ್ತಾ, ವಿದ್ಯಾರ್ಥಿಗಳ ಕಲಿಕೆಯ ಮಟ್ಟವನ್ನು ಹೆಚ್ಚಿಸುತ್ತಿರುವ ಇವರು, ಒಂದರ್ಥದಲ್ಲಿ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ ಗುರುವೂ ಹೌದು. ಕಲಿಕೆಯ ಜತೆ ಜತೆಗೆ ಮಕ್ಕಳಲ್ಲಿ ಕ್ರೀಡಾ ಸ್ಫೂರ್ತಿಯನ್ನೂ ತುಂಬುವ ಕೆಲಸ ಮಾಡುತ್ತಿದ್ದಾರೆ. ಬೋಧನೆ ಜತೆಗೇ ಶಿಕ್ಷಕರ ಸಂಘಟನೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀಯುತರು ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಧಾರವಾಡ ಜಿಲ್ಲಾ ಘಟಕದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ ಶ್ರೀ ಎಫ್ ವಿ ಮಂಜಣ್ಣವರ ನೀಡಿರುವ ಕೊಡುಗೆಯನ್ನು ಪರಿಗಣಿಸಿ ವಿಸ್ತಾರ ನ್ಯೂಸ್ ಗೌರವಿಸಿದೆ.

6.ಶ್ರೀ ಅಹಮದ್ ಮುಜಾವರ

ಸಂಸ್ಥಾಪಕರು ಹಾಗೂ ನಿರ್ದೇಶಕರು, ವಿಕಾಸ ಕರಿಯರ್ ಅಕಾಡೆಮಿ, ಧಾರವಾಡ

ಇಂಗ್ಲಿಷ್ ಎಂದ ಕೂಡಲೇ ಬೆಚ್ಚಿ ಬೀಳುವ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಹೇಳಿಕೊಡುತ್ತಾ, ಅವರಲ್ಲಿ ಆತ್ಮವಿಶ್ವಾಸ ತುಂಬುತ್ತಿರುವ ಶಿಕ್ಷಕರು ಶ್ರೀ ಅಹಮದ್ ಮುಜಾವರ. ಅತಿ ಸುಲಭವಾಗಿ ಪ್ರತಿಯೊಬ್ಬರೂ ಇಂಗ್ಲಿಷ್ ಬರೆಯಲು ಹಾಗೂ ಮಾತನಾಡಲು ಸಾಧ್ಯವಾಗಬೇಕೆಂಬುದು ಇವರ ಕನಸು. ಗ್ರಾಮೀಣ ವಿದ್ಯಾರ್ಥಿಗಳೂ ಸುಲಭವಾಗಿ ಇಂಗ್ಲಿಷ್ ಕಲಿಯಲು ಸಾಧ್ಯವಾಗುವಂತಹ ವಿಧಾನಗಳನ್ನು ಪರಿಚಯಿಸಿದ್ದಾರೆ. ಇದರ ಜತೆಯಲ್ಲಿ ಕಂಪ್ಯೂಟರ್ ಅನ್ನೂ ಹೇಳಿಕೊಡುತ್ತಿದ್ದಾರೆ. ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಜ್ಜುಗೊಳಿಸುವ ಸಲುವಾಗಿ 'ವಿಕಾಸ ಕರಿಯರ್ ಅಕಾಡೆಮಿ' ಪ್ರಾರಂಭಿಸಿರುವ ಇವರು, ಸರ್ಕಾರಿ ಹುದ್ದೆಗಳ ನೇಮಕಕ್ಕಾಗಿ ನಡೆಸಲಾಗುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುತ್ತಾ ಬಂದಿದ್ದಾರೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ, ಆರ್ಥಿಕವಾಗಿ ದುರ್ಬಲರಾದವರಿಗೆ ವಿದ್ಯಾಭ್ಯಾಸಕ್ಕೆ, ಉದ್ಯೋಗ ತರಬೇತಿಗೆ ನೆರವಾಗುತ್ತಿರುವ ಶ್ರೀ ಅಹಮದ್ ಮುಜಾವರ ಅವರು ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯನ್ನು ಪರಿಗಣಿಸಿ ವಿಸ್ತಾರ ನ್ಯೂಸ್ ಗೌರವಿಸುತ್ತಿದೆ.

7. ಶ್ರೀಮತಿ ಲೂಸಿ ಕೆ. ಸಾಲ್ಡಾನಾ

ನಿವೃತ್ತ ಶಿಕ್ಷಕಿ, ಅಕ್ಷರತಾಯಿ ಲೂಸಿ ಸಾಲ್ಡಾನಾ ಸೇವಾ ಸಂಸ್ಥೆ, ಧಾರವಾಡ

ಎಲ್ಲೆಡೆ ಶಾಶ್ವತವಾದ ಅಕ್ಷರ ಬೆಳಕು ಪ್ರಜ್ವಲಿಸಬೇಕೆಂದು ಸರ್ವವನ್ನೂ ಸಮಷ್ಟಿಗಾಗಿ ಸಮರ್ಪಿಸಿದ ಸಮಾಜ ಸೇವಕಿ, ನಿವೃತ್ತ ಶಿಕ್ಷಕಿ ಲೂಸಿ ಕೆ. ಸಾಲ್ಡಾನಾ. ಮೂಲತಃ ಉಡುಪಿ ಜಿಲ್ಲೆಯವರಾದ ಲೂಸಿಯವರು ತಮ್ಮ ಚಿಕ್ಕ ವಯಸ್ಸಿನಲ್ಲೇ ತಂದೆ ತಾಯಿಯನ್ನ ಆಕಸ್ಮಿಕವಾಗಿ ಮುಂಬೈನ ರೈಲ್ವೆ ನಿಲ್ದಾಣದಲ್ಲಿ ಕಳೆದುಕೊಂಡು ಅನಾಥರಾದವರು. ನಾನಾ ಕಷ್ಟಗಳ ನಡುವೆಯೂ ಬಿಎಡ್ ವಿದ್ಯಾಭ್ಯಾಸ ಮಾಡಿ, ಸರ್ಕಾರಿ ಶಾಲೆಯ ಶಿಕ್ಷಕರಾಗಿ ನೇಮಕಗೊಂಡವರು. ಹುಬ್ಬಳ್ಳಿ- ಧಾರವಾಡ ಜಿಲ್ಲೆಯ ಶಾಲೆಗಳಲ್ಲಿ ಬಹು ವರ್ಷಗಳ ಕಾಲ

ಸೇವೆ ಸಲ್ಲಿಸಿದ ಇವರು, ಶಾಲೆಗಳಲ್ಲಿ ಮೂಲ ಸೌಕರ್ಯಗಳಿಲ್ಲದೇ ಇದ್ದುದ್ದರಿಂದ ತಮ್ಮ ಸ್ವಂತ ಹಣದಿಂದಲೇ ಶಾಲೆಗಳ ಅಭಿವೃದ್ಧಿಗೆ ಮುಂದಾದರು. ಸೇವೆ ಪ್ರಾರಂಭಿಸಿದ ದಿನದಿಂದಲೂ ತಮಗೆ ಬಂದ ವೇತನದ ಶೇ. 90ರಷ್ಟನ್ನು ಬಡ ವಿದ್ಯಾರ್ಥಿಗಳ ಓದಿಗೆ ಮೀಸಲಿಟ್ಟು ಮಾದರಿಯಾಗಿದ್ದಾರೆ. ಲೂಸಿ ಸಲ್ಡಾನಾ ಇದುವರೆಗೆ 99ಕ್ಕೂ ಹೆಚ್ಚು ಶಾಲೆಗಳನ್ನು ದತ್ತು ಪಡೆದು, ಅಭಿವೃದ್ಧಿ ಮಾಡಿದ್ದಾರೆ. ಸದ್ಯ ನಿವೃತ್ತರಾಗಿದ್ದರೂ ತಮ್ಮ ಪಿಂಚಣಿಯ ಹಣವನ್ನು ಈ ಕಾರ್ಯಕ್ಕೆ ಮೀಸಲಿಟ್ಟಿದ್ದಾರೆ. ಸೇವಾ ಸಂಸ್ಥೆಯನ್ನು ಆರಂಭಿಸಿ, ಈ ಮೂಲಕ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ದುಡಿಯುತ್ತಿದ್ದಾರೆ. ಪ್ರತಿಭಾವಂತ ಮಕ್ಕಳನ್ನು ಗುರುತಿಸಿ, ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದ್ದಾರೆ. ಇವರ ಆತ್ಮಕಥೆ 'ಕಥೆಯಲ್ಲ ಜೀವನ'ದ ಹೆಸರಿನಲ್ಲಿ ಪ್ರಕಟವಾಗಿದೆ. ಇಂಥ ಶಿಕ್ಷಣ ಪ್ರೇಮಿ ಶ್ರೀಮತಿ ಲೂಸಿ ಕೆ. ಸಾಲ್ಡಾನಾ ಅವರನ್ನು ಪುರಸ್ಕರಿಸಲು ವಿಸ್ತಾರ ನ್ಯೂಸ್ ಹೆಮ್ಮೆ ಪಡುತ್ತಿದೆ.

**8. ಶ್ರೀ ಬಾಬಾಜಾನ್ ಮುಲ್ಲಾ**

ಚಿತ್ರಕಲಾ ಶಿಕ್ಷಕರು, ಶ್ರೀ ಪ್ರಭುದೇವ ಪ್ರೌಢಶಾಲೆ, ಹೊನ್ನಾಪೂರ, ಆಳ್ನಾವರ, ಧಾರವಾಡ.

ಇಪ್ಪತ್ತು ವರ್ಷಗಳ ಕಾಲ ವೇತನವಿಲ್ಲದೆ ಸೇವೆ ಮಾಡಿ ಹೊನ್ನಾಪೂರ ಎಂಬ ಗ್ರಾಮಕ್ಕೆ ಪ್ರೌಢ ಶಾಲೆ ಬರುವಂತೆ ಮಾಡಿದ ಶಿಕ್ಷಣ ಪ್ರೇಮಿ, ಚಿತ್ರಕಲಾ ಶಿಕ್ಷಕ ಶ್ರೀ ಬಾಬಾಜಾನ್ ಮುಲ್ಲಾ. ಹೊನ್ನಾಪೂರ ಶ್ರೀ ಪ್ರಭುದೇವ ಪ್ರೌಢಶಾಲೆಯ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಇವರು, ಶಿಕ್ಷಣದ ಮಹತ್ವವನ್ನು ಪ್ರತಿಯೊಬ್ಬರಿಗೂ ಮನವರಿಕೆ ಮಾಡಿಕೊಡುವ ನಿಟ್ಟಿನಲ್ಲಿ ನಿರಂತರವಾಗಿ ಶ್ರಮಿಸುತ್ತಾ ಬಂದಿದ್ದಾರೆ. ಚಿತ್ರಕಲಾ ಶಿಕ್ಷಕರಾದರೂ ಇತರೆ ವಿಷಯಗಳ ಪಾಂಡಿತ್ಯವನ್ನು ಹೊಂದಿರುವ ಶ್ರೀ ಬಾಬಾಜಾನ್ ಮುಲ್ಲಾ ಅವರು ಮಕ್ಕಳಿಗೆ ಎಲ್ಲಾ ವಿಷಯಗಳ ಬಗ್ಗೆ ಮಾರ್ಗದರ್ಶನ ನೀಡುತ್ತಾ, ಜೀವನ ಪಾಠವನ್ನೂ ಹೇಳಿಕೊಡುತ್ತಿದ್ದಾರೆ. ಪಠ್ಯಾಧಾರಿತ ಹಾಗೂ ಮೌಲ್ಯಾಧಾರಿತ ನಾಟಕ, ಕಿರುಚಿತ್ರಗಳ ನಿರ್ಮಿಸಿ ಶಾಲಾ ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಸ್ವತಃ ತಾವೇ ನಾಟಕ ರಚಿಸಿ ನಿರ್ದೇಶನ ಮಾಡಿದ್ದಾರೆ. ಕಥೆ-ಚಿತ್ರಕಥೆ-ನಿರ್ದೇಶನ ಮಾಡಿ ಹಲವಾರು ಕಿರುಚಿತ್ರಗಳನ್ನು ನಿರ್ಮಿಸಿದ್ದಾರೆ. ಪ್ರತಿವರ್ಷ ಶಿಕ್ಷಣ ಇಲಾಖೆ ನಡೆಸುವ ಡ್ರಾಯಿಂಗ್ ಗ್ರೇಡ್ ಪರೀಕ್ಷೆಯನ್ನು ಗ್ರಾಮೀಣ ಮಕ್ಕಳೂ ತೆಗೆದುಕೊಳ್ಳುವಂತೆ ಜಾಗೃತಿ ಮೂಡಿಸುತ್ತಾ, ಪ್ರತಿಭಾವಂತ ಮಕ್ಕಳನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದ್ದಾರೆ. ರಾಜ್ಯದಲ್ಲಿ ನಕಲು ಮುಕ್ತ ಪರೀಕ್ಷೆ ನಡೆಯಬೇಕೆಂಬ ಉದ್ದೇಶದಿಂದ 'ಯಶಸ್ಸು' ಎಂಬ ಕಿರುಚಿತ್ರ ನಿರ್ಮಾಣ ಮಾಡಿ, ರಾಜ್ಯದ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ ಶ್ರೀ ಬಾಬಾಜಾನ್ ಮುಲ್ಲಾ ನೀಡಿರುವ ಅಪಾರ ಕೊಡುಗೆಯನ್ನು ಪರಿಗಣಿಸಿ ವಿಸ್ತಾರ ನ್ಯೂಸ್ ಗೌರವಿಸುತ್ತಿದೆ.

**9. ಶ್ರೀಮತಿ ಡಾ. ರೋಧಾ ಜೆಸುರಾಜ್**

ಪ್ರಾಂಶುಪಾಲರು, ಶ್ರೀಯಾ ನರ್ಸಿಂಗ್ ಕಾಲೇಜು, ಧಾರವಾಡ

ಇಡೀ ಜಗತ್ತಿನಲ್ಲೇ ಅತಿ ದೊಡ್ಡ ಆರೋಗ್ಯ ಸೇವೆ ಎಂದರೆ ಶುಶ್ರೂಷೆ. ಆರೋಗ್ಯ ಕ್ಷೇತ್ರದಲ್ಲಿ ಶುಶ್ರೂಷಕರ ಪಾತ್ರ ಅತ್ಯಂತ ಪ್ರಮುಖ ಹಾಗೂ ಮಹತ್ವ ಪೂರ್ಣದ್ದು. ಉತ್ತಮ ಶುಶ್ರೂಷಕರನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡುತ್ತಿರುವ ಶಿಕ್ಷಕಿ ಶ್ರೀಮತಿ ಡಾ. ರೋಧಾ ಜೆಸುರಾಜ್. ಮೂಲತಃ ಆಂಧ್ರಪ್ರದೇಶದವರಾದ ಇವರು ಕಳೆದ 26 ವರ್ಷಗಳಿಂದ ನರ್ಸಿಂಗ್ ಕಾಲೇಜಿನಲ್ಲಿ ಬೋಧನೆ ಮಾಡುತ್ತಿದ್ದಾರೆ. ಸದ್ಯ ಧಾರವಾಡದ ಶ್ರೀಯಾ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 2003ರಲ್ಲಿ ಅತ್ಯುತ್ತಮ ಉಪನ್ಯಾಸಕ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಪಾತ್ರರಾಗಿರುವ ಇವರು, ಸದಾ ಕರುಣೆ ಮಮತೆ ಉಳ್ಳ, ರೋಗಿಗಳ ಆರೈಕೆ ಜತೆಗೆ ಅವರಿಗೆ ಆತ್ಮ ಸ್ಥೈರ್ಯ ತುಂಬುವ ಶುಶ್ರೂಷಕರ ರೂಪಿಸುವಲ್ಲಿ ನಿರಾತರಾಗಿದ್ದಾರೆ. 1995ರಲ್ಲಿ ಸರ್ಕಾರಿ

ನರ್ಸಿಂಗ್ ಕಾಲೇಜಿನಲ್ಲಿ ಪದವಿ ಪಡೆದ ಇವರು, 2006ರಲ್ಲಿ ರಾಜೀವ್ ಗಾಂಧಿ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. 2023ರಲ್ಲಿ ಜೆಜೆಟಿಯುನಲ್ಲಿ (JJTU) ನರ್ಸಿಂಗ್‌ನಲ್ಲಿಯೇ ಪಿಎಚ್‌ಡಿ ಮಾಡಿದ್ದಾರೆ. ಆಕರ್ಷಕ ವ್ಯಕ್ತಿತ್ವ ಹೊಂದಿರುವ ಇವರು, 'ಬೆಸ್ಟ್ ಇಂಡಿಯನ್ ಗೋಲ್ಡನ್ ಪರ್ಸನಾಲಿಟಿ', 'ರೈಸಿಂಗ್ ವುಮೆನ್ ಆಫ್ ಇಂಡಿಯಾ' ಹಾಗೂ 'ಭಾರತ್ ಎಕ್ಸಲೆನ್ಸ್' ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಶುಶ್ರೂಷಕರ ಸೇವೆಯು ನೊಂದ ಜೀವಗಳ ಪಾಲಿಗೆ ಸಂಜೀವಿನಿಯಾಗಿದೆ ಎಂದೇ ನಂಬಿರುವ ಶ್ರೀಮತಿ ಡಾ. ರೋಧಾ ಜೆಸುರಾಜ್ ಅವರು ಶಿಕ್ಷಣ ಕ್ಷೇತ್ರಕ್ಕೆ ನೀಡುತ್ತಿರುವ ಕೊಡುಗೆಯನ್ನು ಪರಿಗಣಿಸಿ ವಿಸ್ತಾರ ನ್ಯೂಸ್ ಗೌರವಿಸಿದೆ.

**10.** ಶ್ರೀ ಬಶೀರ ಅಹ್ಮದ್ ಎ. ಬಳ್ಳಾರಿ.

ಸಹ ಶಿಕ್ಷಕರು, ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ, ಜನ್ನತ್‌ನಗರ, ಧಾರವಾಡ

ಉರ್ದು ಮತ್ತು ಕನ್ನಡ ಭಾಷೆಗಳ ನಡುವೆ ಬೇರೆ ಬೇರೆ ನೆಲೆಗಳಲ್ಲಿ ಪರಸ್ಪರ ಸಂಬಂಧಗಳು ಏರ್ಪಟ್ಟಿವೆ. ಇದಕ್ಕೆ ಕೊಂಡಿಯಂತಿರುವವರು ಶ್ರೀ ಬಶೀರ ಅಹ್ಮದ್ ಎ. ಬಳ್ಳಾರಿ. ಧಾರವಾಡ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಲ್ಲಿ ಉರ್ದು ಶಿಕ್ಷಣ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಬಶೀರ ಅಹ್ಮದ್ ಎ. ಬಳ್ಳಾರಿ, ರಾಜ್ಯ ಉರ್ದು ಸಂಪನ್ಮೂಲ ವ್ಯಕ್ತಿಯಾಗಿ ದುಡಿಯುತ್ತಿದ್ದಾರೆ. ಭಾಷಾ ಅನುವಾದಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಎಲ್ಲ ಮಕ್ಕಳ ಭಾಷಾ ಕಲಿಕಾ ಮಟ್ಟವನ್ನು ಸುಧಾರಿಸುವಲ್ಲಿ ತಜ್ಞತೆ ಹೊಂದಿರುವ ಇವರು, ಎಲ್ಲರೂ ಭಾಷೆಯ ಗೊಂದಲವಿಲ್ಲದೆ, ಶಿಕ್ಷಣ ಪಡೆಯಬೇಕು ಎನ್ನುವ ಹಂಬಲ ಹೊಂದಿದ್ದಾರೆ. ಈ ನಿಟ್ಟಿನಲ್ಲಿ ಶಿಕ್ಷಕರಿಗೆ ತರಬೇತಿ ನೀಡುತ್ತಾ, ಹೊಸ ಪ್ರಯೋಗಗಳನ್ನು ನಡೆಸಿಕೊಂಡು ಬಂದಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ ಇವರು ನೀಡುತ್ತಿರುವ ಕೊಡುಗೆಯನ್ನು ಪರಿಗಣಿಸಿ ವಿಸ್ತಾರ ನ್ಯೂಸ್ ಗೌರವಿಸಿದೆ.

**11.** ಶ್ರೀ ಭೀಮಪ್ಪಾ ಎಲ್. ಮಲ್ಲಿಗವಾಡ

ನಿವೇದಿತಾ ಪ್ರಾಥಮಿಕ ಶಾಲೆ, ರಾಮನಗರ, ಧಾರವಾಡ.

ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವದ ವಿಕಸನಕ್ಕೆ ದೈಹಿಕ ಶಿಕ್ಷಣ ಬಹಳ ಮುಖ್ಯ ಎಂದೇ ಪ್ರತಿಪಾದಿಸುತ್ತಾ ಬಂದಿರುವ ದೈಹಿಕ ಶಿಕ್ಷಕರು ಶ್ರೀ ಭೀಮಪ್ಪಾ ಎಲ್. ಮಲ್ಲಿಗವಾಡ. ಅನುದಾನಿತ ನಿವೇದಿತಾ ಪ್ರಾಥಮಿಕ ಶಾಲೆಯಲ್ಲಿ 26 ವರ್ಷ ದೈಹಿಕ ಶಿಕ್ಷಕರಾಗಿ ಹಾಗೂ ಶಾಲೆಯ ಮುಖ್ಯೋಪಾಧ್ಯಾಯರಾಗಿ ಕಾರ್ಯನಿರ್ವಹಿಸಿರುವ ಇವರು, ಮೌಲ್ಯಯುತ ಶಿಕ್ಷಣ ನೀಡಿಕೆಯಲ್ಲಿ ನಂಬಿಕೆ ಇಟ್ಟವರು. ಶಿಕ್ಷಣದ ಜತೆ ಜತೆಗೆ ಜೀವನ ಪಾಠವನ್ನೂ ಹೇಳಿಕೊಡುತ್ತಿರುವ ಶ್ರೀ ಭೀಮಪ್ಪಾ ಎಲ್. ಮಲ್ಲಿಗವಾಡ, ಶಾಲೆಯ ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಮಿಂಚುವಂತೆ ಮಾಡಿದ್ದಾರೆ. ಇದಕ್ಕೆ ಅಗತ್ಯವಾದ ಮೂಲ ಸೌಕರ್ಯವನ್ನು ಒದಗಿಸಿಕೊಟ್ಟಿದ್ದಾರೆ. ವಿದ್ಯಾರ್ಥಿಗಳು ಹೊಸ ಹೊಸ ವಿಷಯಗಳನ್ನು ಕಲಿಯಲು ಪ್ರೋತ್ಸಾಹ ನೀಡುತ್ತಾ ಬಂದಿದ್ದಾ . ದೈಹಿಕ ಶಿಕ್ಷಣದ ವ್ಯಾಪ್ತಿ ಬಹಳ ದೊಡ್ಡದು. ಅದು ಶಾರೀರಿಕ ವ್ಯಾಯಾಮವಷ್ಟೇ ಅಲ್ಲದೆ ಉತ್ತಮ ಜೀವನಶೈಲಿ, ಶಿಸ್ತುಬದ್ಧ ಜೀವನ, ಸ್ಪರ್ಧಾ ಮನೋಭಾವ, ತಾಳ್ಮೆ-ಸಹನೆ ಮೊದಲಾದ ಸಫಲ ಜೀವನಕ್ಕೆ ಬೇಕಾಗುವ ಪ್ರಮುಖ ಪಾಠಗಳನ್ನು ಕಲಿಸುವಂಥದ್ದು ಎಂದು ಹೇಳುತ್ತಲೇ ಬಂದಿರುವ ಶ್ರೀ ಭೀಮಪ್ಪಾ ಎಲ್. ಮಲ್ಲಿಗವಾಡ ಅವರು ಶಿಕ್‌ಷಣ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯನ್ನು ಪರಿಗಣಿಸಿ ವಿಸ್ತಾರ ನ್ಯೂಸ್ ಗೌರವಿಸುತ್ತಿದೆ.

**12**. ಶ್ರೀಮತಿ ವೀಣಾ ಹೊಸಮನಿ

ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನವಲೂರು ತಾಲೂಕು, ಧಾರವಾಡ

ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಧಾರವಾಡ ನಗರ ಘಟಕ.

ಇಂಗ್ಲಿಷ್ ಕುರಿತು ಮಕ್ಕಳಲ್ಲಿರುವ ಭಯವನ್ನು ದೂರ ಮಾಡಿ, ಅವರು ಸುಲಭವಾಗಿ, ಖುಷಿ ಖುಷಿಯಿಂದ ಈ ಭಾಷೆಯನ್ನು ಕಲಿಯುವಂತೆ ಮಾಡುತ್ತಿರುವ ಶಿಕ್ಷಕಿ ಶ್ರೀಮತಿ ವೀಣಾ ಹೊಸಮನಿ. ಕಳೆದ **26** ವರ್ಷಗಳಿಂದ ಇಂಗ್ಲಿಷ್ ಪಾಠ ಮಾಡುತ್ತಿರುವ ಇವರು, ಇಂಗ್ಲಿಷ್ ಕಲಿಕೆಯನ್ನು ಸುಲಭವಾಗಿಸುವ ಹೊಸ ಹೊಸ ವಿಧಾನಗಳನ್ನು ಪರಿಚಯಿಸುತ್ತಾ ಬಂದಿದ್ದಾರೆ. ರಾಜ್ಯ ಸಂಪನ್ಮೂಲ ವ್ಯಕ್ತಿಯಾಗಿ, ಈ ವಿಧಾನಗಳನ್ನು ಬೇರೆ ಶಿಕ್ಷಕರಿಗೂ ಹೇಳಿಕೊಟ್ಟಿದ್ದಾರೆ. ಮಕ್ಕಳ ಕಲಿಕಾ ಮಟ್ಟವನ್ನು ಉತ್ತಮ ಪಡಿಸುವಲ್ಲಿನ ಶ್ರೀಮತಿ ವೀಣಾ ಹೊಸಮನಿ ಅವರ ಪರಿಶ್ರಮವನ್ನು ಗುರುತಿಸಿ ಈಗಾಗಲೇ ಹಲವಾರು ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಲಾಗಿದೆ. 'ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ', 'ಮಹಿಳಾ ಸಾಧಕಿ ಪ್ರಶಸ್ತಿ', 'ಶ್ರೀ ಬಸವೇಶ್ವರ ಪ್ರಶಸ್ತಿ' ಇವುಗಳಲ್ಲಿ ಪ್ರಮುಖವಾದವು. ಮಕ್ಕಳಿಗೆ ಪಾಠ ಮಾಡುತ್ತಲೇ ಶಿಕ್ಷಕರ ಸಂಘಟನೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀಮತಿ ವೀಣಾ ಹೊಸಮನಿ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಧಾರವಾಡ ನಗರ ಘಟಕದ ಉಪಾಧ್ಯಕ್ಷರಾಗಿದ್ದಾರೆ. ಧಾರವಾಡ ಜಿಲ್ಲೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ನೌಕರರ ಸಂಘದ ಜಿಲ್ಲಾ ಅಧ್ಯಕ್ಷರಾಗಿ ನೇಮಕಗೊಂಡಿರುವ ಶ್ರೀಮತಿ ವೀಣಾ ಹೊಸಮನಿ ಉತ್ತಮ ಸಂಘಟಕರಾಗಿ ಹೆಸರು ಮಾಡಿದ್ದಾರೆ. ಅನೇಕ ಸಂಘ, ಸಂಸ್ಥೆಗಳ ಜತೆ ಸೇರಿ ಸಾಮಾಜಿಕ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ ಶ್ರೀಮತಿ ವೀಣಾ ಹೊಸಮನಿ ನೀಡಿರುವ ಕೊಡುಗೆಯನ್ನು ಪರಿಗಣಿಸಿ ವಿಸ್ತಾರ ನ್ಯೂಸ್ ಗೌರವಿಸಿದೆ.

**13**. ಶ್ರೀ ರಾಮಚಂದ್ರ ಎಸ್. ಗೂಳೇರ

ಶಿಕ್ಷಕರು, ಸರ್ಕಾರಿ ಪ್ರಾಥಮಿಕ ಶಾಲೆ, ಗೋಪನ ಕೊಪ್ಪ, ಧಾರವಾಡ

ಶಿಕ್ಷಣವೇ ನನ್ನ ಧರ್ಮ, ಶಾಲೆಯೇ ನನ್ನ ದೇವಾಲಯ, ಮಕ್ಕಳೇ ನನ್ನ ದೇವರು, ಬೋಧನೆಯೇ ನನ್ನ ಪೂಜೆ, ಮಕ್ಕಳ ಸಾಧನೆಯೇ ನನ್ನ ಪಾಲಿಗೆ ಮಹಾಪ್ರಸಾದ... ಹೀಗೆಂದು ನಂಬಿದ ಶಿಕ್ಷಕರು ಶ್ರೀ ರಾಮಚಂದ್ರ ಎಸ್. ಗೂಳೇರ. ಶಾಲೆಯ ಸಹ ಶಿಕ್ಷಕರಾಗಿ, ಇಂಗ್ಲಿಷ್ ಹೇಳಿಕೊಡುತ್ತಲೇ, ವಿದ್ಯಾರ್ಥಿಗಳಲ್ಲಿ ಜೀವನ ಉತ್ಸಾಹ ತುಂಬುತ್ತಿರುವ ಇವರು, ಶಾಲೆಯ ಅಭಿವೃದ್ಧಿಯತ್ತಲೂ ಗಮನ ನೀಡಿದವರು. ಸದ್ಯ ಪ್ರಭಾರ ಉಪ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿರುವ ಇವರು, ಮಕ್ಕಳಲ್ಲಿ ಕಲಿಕೆಯ ಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹೊಸ ಹೊಸ ಪ್ರಯೋಗಗಳನ್ನು ನಡೆಸಿ ಯಶಸ್ವಿಯಾಗಿದ್ದಾರೆ. ಗ್ರಾಮೀಣ ವಿದ್ಯಾರ್ಥಿಗಳಲ್ಲಿ ಇಂಗ್ಲಿಷ್ ಭಾಷೆಯ ಬಗ್ಗೆ ಇರುವ ಭಯವನ್ನು ದೂರ ಮಾಡುವ ನಿಟ್ಟಿನಲ್ಲಿ ಇವರು ನಡೆಸಿದ ಪ್ರಯತ್ನಗಳು ಅನನ್ಯ. ಶಿಕ್ಷಣ ಕ್ಷೇತ್ರಕ್ಕೆ ಇವರು ನೀಡಿರುವ ಕೊಡುಗೆಯನ್ನು ಪರಿಗಣಿಸಿ ಈಗಾಗಲೇ ಹಲವಾರ ಸಂಘ-ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿದ್ದು, ಇದರಲ್ಲಿ, ಜಿಲ್ಲಾ ಮಟ್ಟದ ಮತ್ತು ತಾಲೂಕು ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ, ರೋಟರಿ ಕ್ಲಬ್ ನೀಡುವ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರಮುಖವಾಗಿವೆ. ಶಿಕ್ಷಣ ಕ್ಷೇತ್ರಕ್ಕೆ ಶ್ರೀ ರಾಮಚಂದ್ರ ಎಸ್. ಗೂಳೇರ ನೀಡಿರುವ ಕೊಡುಗೆಗಳನ್ನು ಪರಿಗಣಿಸಿ ವಿಸ್ತಾರ ನ್ಯೂಸ್ ಗೌರವಿಸಿದೆ.

**14.** ಶ್ರೀ ವೆಂಕಣ್ಣ ಎಫ್ ಚುಳಕಿ

ಶಿಕ್ಷಕರು, ಹಿರಿಯ ಪ್ರಾಥಮಿಕ ಶಾಲೆ, ಕುಸುಗಲ್, ಹುಬ್ಬಳ್ಳಿ ತಾಲೂಕು, ಧಾರವಾಡ ಜಿಲ್ಲೆ

ಗ್ರಾಮಸ್ಥರಿಂದ ಹಣ ಸಂಗ್ರಹಿಸಿ, ಶಾಶ್ವತ ನಿಧಿಯೊಂದನ್ನು ಸ್ಥಾಪಿಸಿ, ಪ್ರತಿ ವರ್ಷ ಅದರಿಂದ ಬರುವ ಬಡ್ಡಿ ಹಣವನ್ನು ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಕಾರ್ಯಕ್ಕೆ ಬಳಕೆಯಾಗುವಂತೆ ನೋಡಿಕೊಳ್ಳುತ್ತಿರುವ ಶಿಕ್ಷಕರು ಶ್ರೀ ವೆಂಕಣ್ಣ ಎಫ್. ಚುಳಕಿ. ಹುಬ್ಬಳ್ಳಿ ತಾಲೂಕಿನ ಕುಸುಗಲ್ ಗ್ರಾಮದಿಂದ ವೃತ್ತಿ ಜೀವನ ಆರಂಭಿಸಿದ ಇವರು, ಕಳೆದ 26 ವರ್ಷಗಳಿಂದ ಶಿಕ್ಷಕರಾಗಿ ಮಕ್ಕಳಿಗೆ ಶಿಕ್ಷಣ ನೀಡುವುದರ ಜತೆಗೆ ಜೀವನ ಪಾಠವನ್ನೂ ಹೇಳಿಕೊಡುತ್ತಿದ್ದಾರೆ. ಸಹ ಶಿಕ್ಷಕರಾಗಿದ್ದ ಇವರು ಕುಸುಗಲ್ ಹಿರಿಯ ಪ್ರಾಥಮಿಕ ಶಾಲೆಯ ಪ್ರಭಾರಿ ಮುಖ್ಯ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳು ಖಾಸಗಿ ಶಾಲೆಯ ಮಕ್ಕಳು ಪಡೆಯುವ ಎಲ್ಲ ಸೌಕರ್ಯಗಳ ಪಡೆದುಕೊಳ್ಳಬೇಕೆಂಬ ನಿಟ್ಟಿನಲ್ಲಿ ನಿರಂತರವಾಗಿ ಪ್ರಯತ್ನ ನಡೆಸುತ್ತಲೇ ಬಂದಿರುವ ಇವರು, ದಾನಿಗಳಿಂದ ಹಣ ಸಂಗ್ರಹಿಸಿ, ಶಾಲೆಗೆ ಬೇಕಾದ ಸಿ.ಸಿ. ಟಿವಿ ಕ್ಯಾಮರಾ ಅಳವಡಿಸಿದ್ದಾರೆ. ಶಾಲೆಯಲ್ಲಿ ಎಲ್‌ಕೆಜಿ, ಯುಕೆಜಿಯನ್ನು ಆರಂಭಿಸಿದ್ದಾರೆ. ಗಂಡು ಮಕ್ಕಳ ಶಾಲೆಯನ್ನು ಅಭಿವೃದ್ಧಿ ಪಡಿಸಿದ್ದಾರೆ. ಶಾಲೆಯ ಚುಟವಟಿಕೆಗಳ ಜತೆಗೆ ಶಿಕ್ಷಕರ ಸಂಘಟನೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿರುವ ಇವರು, ಸದ್ಯ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ ಶ್ರೀ ವೆಂಕಣ್ಣ ಎಫ್ ಚುಳಕಿ ಅವರು ನೀಡಿರುವ ಕೊಡುಗೆಯನ್ನು ಪರಿಗಣಿಸಿ ವಿಸ್ತಾರ ನ್ಯೂಸ್ ಗೌರವಿಸಿದೆ.

**15.** ಶ್ರೀಮತಿ ಮಾರ್ಗರೇಟ್ ಎಸ್. ಕೊಂಗಿ

ಶಿಕ್ಷಕರು, ಓಂ ಆಂಗ್ಲ ಮಾಧ್ಯಮ ಪ್ರೌಢ ಶಾಲೆ, ಧಾರವಾಡ.

ಮೌಲ್ಯಯುತ ಸಮಾಜ ನಿರ್ಮಾಣ ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ಬಲವಾಗಿ ನಂಬಿದವರು ಶ್ರೀಮತಿ ಮಾರ್ಗರೇಟ್ ಎಸ್. ಕೊಂಗಿ. ಕಳೆದ 18 ವರ್ಷಗಳಿಂದ ನಾಳೆಯ ಪ್ರಜೆಗಳಾಗಿರುವ ಇಂದಿನ ಮಕ್ಕಳೊಂದಿಗೆ ಬೆರೆಯುತ್ತಾ, ಅವರಿಗೆ ಶಿಕ್ಷಣ ನೀಡುವ ಮೂಲಕವೇ ಪರಿವರ್ತನೆ ತರುತ್ತಿದ್ದಾರೆ. 2006 ರಲ್ಲಿ ಕಲಘಟಗಿಯ ಸೆಂಟ್ ಮೇರಿ ಪ್ರೌಢ ಶಾಲೆಯಲ್ಲಿ ಶಿಕ್ಷಕಿಯಾಗುವ ಮೂಲಕ ವೃತ್ತಿ ಜೀವನ ಆರಂಭಿಸಿದ ಇವರು, ಧಾರವಾಡದ ಪವನ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ಸದ್ಯ ಓಂ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ ಶಿಕ್ಷಕಿಯಾಗಿರುವ ಇವರು, ವಿದ್ಯಾರ್ಥಿಗಳ ಇಂಗ್ಲಿಷ್ ಕಲಿಕೆಯ ಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಶಾಲೆಯಲ್ಲಿ ಶಿಕ್ಷಣದ ನೀಡುವುದರ ಜತೆಗೆ ಬದುಕಿನ ಪಾಠವನ್ನೂ ಹೇಳಿಕೊಡುತ್ತಾ, ಎಲ್ಲರ ಮೆಚ್ಚುಗೆಗೆ ಪಾತ್ರರಾಗಿರುವ ಶ್ರೀಮತಿ ಮಾರ್ಗರೇಟ್ ಎಸ್. ಕೊಂಗಿ ಸಮಾಜ ಸೇವೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ತಮ್ಮ ಬಿಡುವಿನ ವೇಳೆಯಲ್ಲಿ ಗೃಹಿಣಿಯರಿಗೆ, ಉದ್ಯೋಗಸ್ಥ ಮಹಿಳೆಯರಿಗೆ ಆತ್ಮವಿಶ್ವಾಸ ತುಂಬುವ ನಿಟ್ಟಿನಲ್ಲಿ ಆನ್‌ಲೈನ್‌ನಲ್ಲಿಯೇ ಇಂಗ್ಲಿಷ್ ನಲ್ಲಿ ಮಾತನಾಡುವ ಕಲೆ ಕಲಿಸುತ್ತಿರುವ ಇವರು, ನೊಂದವರಿಗೆ, ಅಶಕ್ತರಿಗೆ, ನಿರುದ್ಯೋಗಿಗಳಿಗೆ ನೆರವಾಗುತ್ತಾ ಬಂದಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ ಶ್ರೀಮತಿ ಮಾರ್ಗರೇಟ್ ಎಸ್. ಕೊಂಗಿ ನೀಡಿರುವ ಕೊಡುಗೆಗಳನ್ನು ಪರಿಗಣಿಸಿ ವಿಸ್ತಾರ ನ್ಯೂಸ್ ಗೌರವಿಸುತ್ತಿದೆ.

16. ಶ್ರೀ ಡಾ. ಬಸವರಾಜ್ ಗೊಲ್ಲಪ್ಪ ಬಿರಾದಾರ

ಪ್ರಾಂಶುಪಾಲರು, ಗುಡ್‌ನ್ಯೂಸ್ ವೆಲ್ಫೇರ್ ಸೊಸೈಟಿಯ ಕಲಾ ಮತ್ತು ವಾಣಿಜ್ಯ ಕಾಲೇಜು, ಕಲಘಟಗಿ

ಸಾಹಿತಿ, ಸಂಶೋಧಕ, ಉಪನ್ಯಾಸಕ, ಆಡಳಿತಗಾರ... ಹೀಗೆ ಬಹುಮುಖ ಪ್ರತಿಭೆ ಶ್ರೀ ಡಾ. ಬಸವರಾಜ್ ಗೊಲ್ಲಪ್ಪ ಬಿರಾದಾರ. ಕಲಘಟಗಿಯ ಗುಡ್‌ನ್ಯೂಸ್ ವೆಲ್ಫೇರ್ ಸೊಸೈಟಿಯ ಕಲಾ ಮತ್ತು ವಾಣಿಜ್ಯ ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿರುವ ಇವರು ಶಿಕ್ಷಣ ಸಂಸ್ಥೆಯನ್ನು ಕಟ್ಟುವುದರಲ್ಲಿ ನಿಪುಣರು. ಸರ್ವರಿಗೂ ಶಿಕ್ಷಣ ದೊರೆಯಬೇಕೆಂದು ಕನಸು ಹೊತ್ತು, ಈ ನಿಟ್ಟಿನಲ್ಲಿ ಅವಿರತವಾಗಿ ಶ್ರಮಿಸುತ್ತಾ ಬಂದಿದ್ದಾರೆ. ಕಳೆದ 32 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. 1991 ರಲ್ಲಿ ಉಪನ್ಯಾಸಕರಾಗಿ ವೃತ್ತಿ ಜೀವನ ಆರಂಭಿಸಿದ ಇವರು, ಈಗ ಪ್ರತಿಷ್ಠಿತ ಕಾಲೇಜಿನ ಪ್ರಾಂಶುಪಾಲರಾಗಿ ಸಾವಿರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುತ್ತಲೇ ಅವರ ಸಮಸ್ಯೆ ಬಗೆಹರಿಸುತ್ತಾ ಬಂದಿದ್ದಾರೆ. ಅನೇಕ ರಾಜ್ಯಮಟ್ಟದ ವಿಚಾರ ಸಂಕಿರಣಗಳಲ್ಲಿ ಪ್ರೌಢ ಪ್ರಬಂಧ ಮಂಡಿಸಿರುವ ಇವರು ಎಂಟಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಇವರ 30 ಕ್ಕೂ ಹೆಚ್ಚು ಲೇಖನಗಳು ಪ್ರಕಟವಾಗಿ . ಕಲಘಟಗಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಸಾಹಿತ್ಯ ಸೇವೆ ಮಾಡಿರುವ ಇವರು ಕಾಲೇಜು ಶಿಕ್ಷಕರ ಸಂಘದ ಪದಾಧಿಕಾರಿಯಾಗಿ ಸಂಘಟನೆ ಮಾಡಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ ಶ್ರೀ ಡಾ. ಬಸವರಾಜ್ ಗೊಲ್ಲಪ್ಪ ಬಿರಾದಾರ ನೀಡಿರುವ ಅಪಾರ ಕೊಡುಗೆಯನ್ನು ಪರಿಗಣಿಸಿ ವಿಸ್ತಾರ ನ್ಯೂಸ್ ಹೆಮ್ಮೆಯಿಂದ ಅವರನ್ನು ಗೌರವಿಸಿದೆ.

17. ಶ್ರೀ ಸಿದ್ದಣ್ಣ ಅಶೋಕ ದಳವಾಯಿ

ಸ್ಪರ್ಧಾ ಜೀನಿಯಸ್ ಅಕಾಡೆಮಿ, ಜಯನಗರ ಕ್ರಾಸ್, ಧಾರವಾಡ.

ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಸೂಕ್ತ ತರಬೇತಿ ನೀಡುತ್ತಾ, ಅವರು ಬದುಕು ಕಟ್ಟಿಕೊಳ್ಳಲು ನೆರವಾಗುತ್ತಿರುವ ಶಿಕ್ಷಕರು ಶ್ರೀ ಸಿದ್ದಣ್ಣ ಅಶೋಕ ದಳವಾಯಿ. ಧಾರವಾಡದ ಸ್ಪರ್ಧಾ ಜೀನಿಯಸ್ ಅಕಾಡೆಮಿಯಲ್ಲಿ ಇತಿಹಾಸ ವಿಷಯದ ಉಪನ್ಯಾಸಕರಾಗಿರುವ ಇವರು ಕಳೆದ ಎಂಟು ವರ್ಷಗಳಿಂದ ನೂರಾರು ವಿದ್ಯಾರ್ಥಿಗಳು ಉದ್ಯೋಗ ಪಡೆಯಲು ಕಾರಣರಾಗಿದ್ದಾರೆ. ಇತಿಹಾಸ, ವಿಜ್ಞಾನ, ಮಾನಸಿಕ ಸಾಮರ್ಥ್ಯ, ಭಾರತೀಯ ಸಂವಿಧಾನ ಮತ್ತು ವ್ಯಕ್ತಿತ್ವ ವಿಕಸನ ವಿಷಯಗಳಲ್ಲಿ ಬೋಧನಾ ಅನುಭವ ಹೊಂದಿರುವ ಇವರಿಂದ ತರಬೇತಿ ಪಡೆದ 90ಕ್ಕೂ ಹೆಚ್ಚು ಅಭ್ಯರ್ಥಿಗಳು ಪಿಎಸ್ಐ ಪರೀಕ್ಷೆಯಲ್ಲಿ, ಒಂದು ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ಪೊಲೀಸ್ ಕಾನ್ಸ್‌ಸ್ಟೇಬಲ್ ಪರೀಕ್ಷೆಯಲ್ಲಿ ಹಾಗೂ 150ಕ್ಕೂ ಹೆಚ್ಚು ಅಭ್ಯರ್ಥಿಗಳು ಎಫ್‌ಡಿಎ/ಎಸ್‌ಡಿಎ ಪರೀಕ್ಷೆಯಲ್ಲಿ ಹಾಗೂ ನೂರಕ್ಕೂ ಹೆಚ್ಚು ಅಭ್ಯರ್ಥಿಗಳು ಶಿಕ್ಷಕರ ನೇಮಕಾತಿ ಪರೀಕ್ಷೆಯಲ್ಲಿ ಅರ್ಹತೆ ಪಡೆದಿದ್ದಾರೆ. 500ಕ್ಕೂ ಹೆಚ್ಚು ರೈತರ ಮಕ್ಕಳಿಗೆ, ಅಂಗವಿಕಲರು ಹಾಗೂ ಮಾಜಿ ಸೈನಿಕರಿಗೆ ರಿಯಾಯಿತಿ ಶುಲ್ಕದಲ್ಲಿ ಹಾಗೂ ನೂರಾರು ಜನರಿಗೆ ಸಂಪೂರ್ಣ ಉಚಿತವಾಗಿ ತರಬೇತಿ ನೀಡಿದ್ದಾರೆ. ರಾಜ್ಯದ ವಿವಿಧ ಭಾಗಗಳಲ್ಲಿ ಉಪನ್ಯಾಸ ನೀಡಿ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಜಾಗೃತಿ ಮೂಡಿಸಿದ ಶ್ರೀ ಸಿದ್ದಣ್ಣ ಅಶೋಕ ದಳವಾಯಿ ಅವರ ಸೇವೆಯನ್ನು ಪರಿಗಣಿಸಿ ವಿಸ್ತಾರ ನ್ಯೂಸ್ ಗೌರವಿಸಿದೆ.

18. ಶ್ರೀ ಪ್ರೊ ನಾಗೇಶ್ ವೈ ಅಣ್ಣಿಗೇರಿ

ಸಂಸ್ಥಾಪಕರು, ವೈ.ಬಿ. ಅಣ್ಣಿಗೇರಿ ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ, ಧಾರವಾಡ

ವಿದ್ಯಾರ್ಥಿಗಳಲ್ಲಿನ ಗಣಿತದ ಭಯವನ್ನು ದೂರ ಮಾಡಿ, ಸುಲಭವಾಗಿ ಮತ್ತು ಸುಲಲಿತವಾಗಿ ಅವರು ಗಣಿತ ಕಲಿಯುವಂತೆ ಮಾಡುತ್ತಿರುವ ಗಣಿತ ಶಾಸ್ತ್ರದ ತಜ್ಞ ಪ್ರೊ ನಾಗೇಶ್ ವೈ ಅಣ್ಣಿಗೇರಿ. ಧಾರವಾಡದ ವೈ.ಬಿ. ಅಣ್ಣಿಗೇರಿ ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯದ ಸಂಸ್ಥಾಪಕರು ಮತ್ತು ಅಧ್ಯಕ್ಷರಾದ ಇವರು ಲೆಕ್ಕ ಎಂದರೆ ಕಬ್ಬಿಣದ ಕಡಲೆ ಎಂಬ ವಾಡಿಕೆಯ ಮಾತು ಸುಳ್ಳು ಎಂದು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಸುತ್ತಾ ಬಂದಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದಿಂದ ಗಣಿತ ಶಾಸ್ತ್ರದಲ್ಲಿ ಎಂಫಿಲ್ ಪದವಿ ಪಡೆದಿರುವ ಇವರು ಮೊದಲು ಅಣ್ಣಿಗೇರಿ ಟ್ಯುಟೋರಿಯಲ್ ಆರಂಭಿಸಿ ಬಳಿಕ 2013ರಲ್ಲಿ ತಮ್ಮದೇ ಆದ ಪಿಯು ವಿಜ್ಞಾನ- ವಾಣಿಜ್ಯ ಪದವಿ ಪೂರ್ವ ಕಾಲೇಜು ಆರಂಭಿಸಿದರು. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಮೌಲ್ಯಯುತ ಮತ್ತು ಸಂಸ್ಕಾರಯುತ ಶಿಕ್ಷಣ ನೀಡುತ್ತಿರುವ ಇವರು, ಮಕ್ಕಳಲ್ಲಿ ನಾಯಕತ್ವ ಗುಣ ಬೆಳೆಸುವ ಕೆಲಸ ಮಾಡುತ್ತಿದ್ದಾರೆ. ಆರ್ಥಿಕವಾಗಿ ದುರ್ಬಲರಾದವರಿಗೆ ಉಚಿತ ಶಿಕ್ಷಣ ನೀಡಿ ಅವರಿಗೆ ಬೇಕಾದ ಎಲ್ಲ ಸೌಕರ್ಯಗಳನ್ನು ಒದಗಿಸುತ್ತಿದ್ದಾರೆ. ಕಾಲೇಜಿನಲ್ಲಿ ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಿಗೂ ಆದ್ಯತೆ ನೀಡುತ್ತಿರುವ ಪ್ರೊ ನಾಗೇಶ್ ವೈ. ಅಣ್ಣಿಗೇರಿ ಅವರು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಭವಿಷ್ಯ ರೂಪಿಸಿಕೊಳ್ಳಲು ಸೂಕ್ತ ಮಾರ್ಗದರ್ಶನ ನೀಡುತ್ತಾ ಬಂದಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ ಶ್ರೀ ಪ್ರೊ ನಾಗೇಶ್ ವೈ. ಅಣ್ಣಿಗೇರಿ ಅವರು ನೀಡಿರುವ ಮಹತ್ತರ ಕೊಡುಗೆಯನ್ನು ಪರಿಗಣಿಸಿ ವಿಸ್ತಾರ ನ್ಯೂಸ್ ಗೌರವಿಸುತ್ತಿದೆ.